# ಬೇವು ಬೆಲ್ಲದೊಳಿಡಲೇನು ಫಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** Lyrics given here are as per Ref. 1. The wordings in Ref. 2 are slightly different and are not considered here.
4. **Note:** Singer has followed these lyrics.

ರಾಗ: ಬೇಹಾಗ್ ತಾಳ: ಆದಿ

ಬೇವು ಬೆಲ್ಲದೊಳಿಡಲೇನು ಫಲ ?
ಹಾವಿಗೆ ಹಾಲೆರೆದೇನು ಫಲ ? || ಪ ||

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನವ ಮಾಡಿದರೇನು ಫಲ ?
ಸಟೆಯನ್ನಾಡುವ ಮನುಜರು ಮನದಲಿ
ವಿಠಲನ ನೆನೆದರೇನು ಫಲ? || 1 ||

ಕಪಟತನದಿ ವಂಚಿಸುವ ಮನುಜರು
ಜಪಗಳ ಮಾಡಿದರೇನು ಫಲ?
ಕುಪಿತಬುದ್ಧಿಯನು ತ್ಯಜಿಸದೆ ನಿತ್ಯದಿ
ಉಪವಾಸವಿದ್ದರಿನ್ನೇನು ಫಲ ? || 2 ||

ಮಾತಾಪಿತರನು ಬಳಲಿಸುವ ಮಗ
ಯಾತ್ರೆಯ ಮಾಡಿದರೇನು ಫಲ ?
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ ? || 3 ||

ಪತಿಯನು ನಿಂದಿಸಿ ಬೊಗಳುವ ಸತಿಯಳು
ವ್ರತಗಳ ಮಾಡಿದರೇನು ಫಲ ?
ಅತಿಥಿಗಳೆಡೆಯಲಿ ಭೇದವ ಮಾಡುತ
ಗತಿಯನು ಬಯಸಿದರೇನು ಫಲ ? || 4 ||

ಹೀನಕೃತ್ಯಗಳ ಮಾಡುತ ನದಿಯಲಿ
ಸ್ನಾನವ ಮಾಡಿದರೇನು ಫಲ ?
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶುದ್ಧ ಮಾನವ ನೀತಿಯನ್ನು ದಾಸರು ಈ ಹಾಡಿನಲ್ಲಿ ವರ್ಣಿಸಿದ್ದಾರೆ.

ಹೊರಗಿನ ಪ್ರಯತ್ನಗಳಿಂದ, ರೂಢ ಮೂಲವಾಗಿರುವ ಆಂತರಿಕ ಸ್ವಭಾವಗಳನ್ನು ಚಿವುಟಿ ಹಾಕುವುದು ಸಾಧ್ಯವಿಲ್ಲ. ಬೇವಿನ ಕಹಿ ಬೆಲ್ಲದಲ್ಲಿರಿಸಿದರೆ ಹೋಗುವುದಿಲ್ಲ. ಹಾಲು ಸಾತ್ತ್ವಿಕವಾದ ಆಹಾರವೇ; ಆದರೆ ಅದನ್ನು ಕುಡಿದ ಹಾವು ಸಾತ್ತ್ವಿಕವಾಗುವುದಿಲ್ಲ.

**ಕುಟಿಲ** = ವಂಚನೆ

**ಸಟೆ** = ಸುಳ್ಳು

**ಕುಪಿತ** = ಸಿಟ್ಟು

**Classification:** Keerthane
**Ankita:** purandara vittala
**Location:** NA
**Category:** Hitanudi, Jeevana Sambodhane
**Sub-Category:** bEvu, bella, sullu, sittu, mantra, jana, bayyi, pati, patni, nadi, tande, tayi, maga, vrata, japa, uraga, halu, phala,
**Pravachana:** NA
**Explanation:** NA